**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು :**

**ವಿಷಯ :** ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಹಿಂದೆ ಬಡ್ತಿ ಮೀಸಲಾತಿಯನ್ನು ಪರಿಗಣಿಸಿ ವಿವಿಧ ವೃಂದಗಳಿಗೆ ನೀಡಲಾಗಿದ್ದ ಬಡ್ತಿಗಳನ್ನು ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ Ad-hoc ಎಂದು ಪರಿಗಣಿಸಿ **ಹಿಂಬಡ್ತಿ** ನೀಡುವ ಬಗ್ಗೆ ಹಾಗೂ ಹಿಂಬಡ್ತಿಯಿಂದ ತೆರವಾದ ಖಾಲಿ ಹುದ್ದೆಗಳಿಗೆ ಅರ್ಹ ನೌಕರರಿಗೆ **ಮುಂಬಡ್ತಿ** ನೀಡುವ ಬಗ್ಗೆ.

**ಉಲ್ಲೇಖ :**

1. ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ : 2368/ 2011ರ ಸಂಬಂಧದಲ್ಲಿ (ಬಿ.ಕೆ. ಪವಿತ್ರ ಪ್ರಕರಣ) ನೀಡಿರುವ ದಿನಾಂಕ :09.02.2017ರ ತೀರ್ಪು.
2. ದಿನಾಂಕ : 06.05.2017ರ ಸಂಖ್ಯೆ : ಸಿಆಸುಇ/182/ಸೇನೆನಿ/ 2011ರ ಸರ್ಕಾರಿ ಆದೇಶ.
3. ದಿನಾಂಕ : 14.11.2017 ರ ಸಂಖ್ಯೆ : ಕಾಶಿಇ/39/ ಸ.ನಿ.ಜೇಪ/ಬಸ್ಥಾವಿ/2017-18ರ ಅಧಿಕೃತ ಜ್ಞಾಪನ. **(ಸಹಾಯಕ ನಿರ್ದೇಶಕರ ಜ್ಯೇಷ್ಠತಾ ಪಟ್ಟಿ-ಆರ್.ಕೆ.)**
4. ಈ ಕಛೇರಿಯ ದಿನಾಂಕ : 29.11.2017ರ ಸಂಖ್ಯೆ : ಕಾಶಿಇ/48/ಹೈ.ಕಜೇಪ/ಬಸ್ಥಾವಿ/2017-18ರ ಅಧಿಕೃತ ಜ್ಞಾಪನ ದೊಂದಿಗೆ ಪ್ರಕಟಿಸಿರುವ **ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸಹಾಯಕ ನಿರ್ದೇಶಕರ ಜ್ಯೇಷ್ಠತಾ ಪಟ್ಟಿ.**
5. ದಿನಾಂಕ : 27.03.2018 ರ ಸಂಖ್ಯೆ : ಸಿಆಸುಇ/639/ ಸೇನೆನಿ/2017 ರ ಸರ್ಕಾರಿ ಸುತ್ತೋಲೆ.
6. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ದಿನಾಂಕ : 04.04.2018 ರ ಸಂಖ್ಯೆ : ಸಿಆಸುಇ/639/ ಸೇನೆನಿ/2017 ರ ಸರ್ಕಾರಿ ಸುತ್ತೋಲೆ.
7. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ದಿನಾಂಕ : 13.04.2018ರ ಸಂಖ್ಯೆ : ಮುಖ/500/2018ರ ಸುತ್ತೋಲೆ.
8. ಈ ಕಛೇರಿಯ ದಿನಾಂಕ : 17.04.2018ರ ಸಮಸಂಖ್ಯೆಯ ಆದೇಶ (ಹಿಂಬಡ್ತಿ ಮತ್ತು ಮುಂಬಡ್ತಿ ನೀಡಲಾಗಿದ್ದ ಆದೇಶ).
9. ದಿನಾಂಕ : 29.05.2018ರ ಸಂಖ್ಯೆ : ಕಾಶಿಇ/36/ ಶೀಲಿಜೇಪ/ಬಸ್ಥಾವಿ/2017-18ರ ಅಧಿಕೃತ ಜ್ಞಾಪನ **(ಶೀಘ್ರಲಿಪಿಗಾರರ ಜ್ಯೇಷ್ಠತಾ ಪಟ್ಟಿ-ಆರ್.ಕೆ.)**
10. ದಿನಾಂಕ : 29.05.2018ರ ಸಂಖ್ಯೆ : ಕಾಶಿಇ/38/ ಅಜೇಪ/ಬಸ್ಥಾವಿ/2017-18ರ ಅಧಿಕೃತ ಜ್ಞಾಪನ **(ಅಧೀಕ್ಷಕರ ಜ್ಯೇಷ್ಠತಾ ಪಟ್ಟಿ-ಆರ್.ಕೆ.)**
11. ದಿನಾಂಕ : 29.05.2018 ರ ಸಂಖ್ಯೆ : ಕಾಶಿಇ/40/ ಮ್ಯಾಜೇಪ/ಬಸ್ಥಾವಿ/2017-18ರ ಅಧಿಕೃತ ಜ್ಞಾಪನ. **(ಮ್ಯಾನೇಜರ್ ಜ್ಯೇಷ್ಠತಾ ಪಟ್ಟಿ-ಆರ್.ಕೆ.)**
12. ದಿನಾಂಕ : 21.05.2018ರ ಸಂಖ್ಯೆ : ಸಿಆಸುಇ/442/ಸೇನೆನಿ/ 2017ರ ಅನಧಿಕೃತ ಟಿಪ್ಪಣಿಯೊಂದಿಗೆ ರವಾನಿಸಿರುವ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ದಿನಾಂಕ : 19.05.2018ರ ನಡವಳಿಗಳು.

** ** **

DCE-12-GRADATION-2017-18

**ಪ್ರಸ್ತಾವನೆ :**

ಶ್ರೀ.ಬಿ.ಕೆ.ಪವಿತ್ರ ಹಾಗೂ ಇತರರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ಸಿವಿಲ್ ಅಪೀಲಿಗೆ ಸಂಬಂಧಿಸಿದಂತೆ, ಮಾನ್ಯ ನ್ಯಾಯಾಲಯವು ದಿನಾಂಕ:09-02-2017ರಂದು ನೀಡಿರುವ ತೀರ್ಪಿನಲ್ಲಿ (ಉಲ್ಲೇಖ-1) ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.

**"……..Consequential promotions granted to serving employees, based on consequential seniority benefit, will be treated as *ad-hoc* and liable to be reviewed".**

2. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅನುಷ್ಠಾನಗೊಳಿಸಲು ಸರ್ಕಾರವು ದಿನಾಂಕ : 06.05.2017ರ ಆದೇಶದಲ್ಲಿ ನೀಡಿದ ಸೂಚನೆಯಂತೆ, ಈ ಇಲಾಖೆಯ ಎಲ್ಲಾ ಬೋಧಕರು, ಗ್ರೇಡ್-1 ಪ್ರಾಂಶುಪಾಲರು, ದೈಹಿಕ ಶಿಕ್ಷಣ ನಿರ್ದೇಶಕರು, ಗ್ರಂಥಪಾಲಕರು ಮತ್ತು **ಬೋಧಕೇತರ ವೃಂದಗಳಿಗೆ** ಸಂಬಂಧಿಸಿದಂತೆ ಗ್ರೂಪ್'ಡಿ' ಹುದ್ದೆಯಿಂದ ಉಪನಿರ್ದೇಶಕರ ಹುದ್ದೆಯ ತನಕ ಎಲ್ಲಾ ವೃಂದಗಳ "ಅಂತಿಮ ಜ್ಯೇಷ್ಠತಾ ಪಟ್ಟಿ"ಗಳನ್ನು **"ಅಂತಿಮಗೊಳಿಸಿ"** (Finalise), ಈ ಕಛೇರಿಯ ವಿವಿಧ ಅಧಿಕೃತ ಜ್ಞಾಪನಗಳಲ್ಲಿ ಈಗಾಗಲೇ ಪ್ರಕಟಿಸಲಾಗಿತ್ತು. ಸದರಿ ಅಂತಿಮ ಜ್ಯೇಷ್ಠತಾ ಪಟ್ಟಿಗಳಲ್ಲಿ **Ad-hoc** ಎಂದು ಪರಿಗಣಿಸಿರುವ ಅಧಿಕಾರಿ/ನೌಕರರಿಗೆ "ಹಿಂಬಡ್ತಿ ಮತ್ತು ಮುಂಬಡ್ತಿ" ನೀಡುವ ಬಗ್ಗೆ ತತ್ಪರಿಣಾಮದ ಕ್ರಮಗಳನ್ನು ಕೈಗೊಂಡು ಅನುಸರಣಾ ವರದಿಯನ್ನು ಜರೂರು ಸರ್ಕಾರಕ್ಕೆ ಕಳುಹಿಸಲು ಉಲ್ಲೇಖ (5) ಮತ್ತು (6)ರ ಸರ್ಕಾರಿ ಸುತ್ತೋಲೆಗಳಲ್ಲಿ ಸೂಚಿಸಲಾಗಿತ್ತು.

3. ಈ ಇಲಾಖೆಯಲ್ಲಿ ದಿನಾಂಕ : 30.06.2017ರಲ್ಲಿದ್ದಂತೆ ಪ್ರಕಟಿಸಿರುವ **ಸಹಾಯಕ ನಿರ್ದೇಶಕರು, ಗೆಜೆಟೆಡ್ ಮ್ಯಾನೇಜರ್ ಮತ್ತು ಶೀಘ್ರಲಿಪಿಗಾರರ** ಅಂತಿಮ ಜ್ಯೇಷ್ಠತಾ ಪಟ್ಟಿಗಳ ಆಧಾರದ ಮೇಲೆ **Ad-hoc** ಎಂದು ಪರಿಗಣಿಸಿ, ಸೇವೆಯಲ್ಲಿ ಮುಂದುವರೆಯುತ್ತಿರುವ 04 ಸಹಾಯಕ ನಿರ್ದೇಶಕರಿಗೆ, 06 ಗೆಜೆಟೆಡ್ ಮ್ಯಾನೇಜರ್‌ಗಳಿಗೆ ಮತ್ತು 01 ಶೀಘ್ರಲಿಪಿಗಾರರಿಗೆ ದಿನಾಂಕ : 27.03.2018 ಮತ್ತು 04.04.2018 ರ ಸರ್ಕಾರಿ ಸುತ್ತೋಲೆಗಳಲ್ಲಿ ನೀಡಿದ್ದ ಸೂಚನೆಯಂತೆ, (ಉಲ್ಲೇಖ-5 ಮತ್ತು 6) **ಈ ಹಿಂದೆ ಸಾಂಧರ್ಭಿಕ ಹಿರಿತನದ ಆಧಾರದ ಮೇಲೆ ನೀಡಲಾಗಿದ್ದ ಸಾಂಧರ್ಭಿಕ ಬಡ್ತಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಕಛೇರಿಯ ದಿನಾಂಕ : 17.04.2018ರ ಸಮಸಂಖ್ಯೆಯ ಆದೇಶದಲ್ಲಿ (ಉಲ್ಲೇಖ-8) ಹಿಂಬಡ್ತಿ ಮತ್ತು ಮುಂಬಡ್ತಿ ನೀಡುವ ಮೂಲಕ ತತ್ಪರಿಣಾಮದ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು.**

4. ಆದರೆ, ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ದಿನಾಂಕ : 04.04.2018 ಮತ್ತು 13.04.2018ರ ಸುತ್ತೋಲೆಗಳಲ್ಲಿ (ಉಲ್ಲೇಖ-6 ಮತ್ತು 7) ಕಲ್ಪಿಸಿರುವ ಅವಕಾಶದ ಮೇರೆಗೆ ಪುನರ್ ಪರಿಶೀಲಿಸಲಾಗಿ, ಶೀಘ್ರಲಿಪಿಗಾರರ ಜ್ಯೇಷ್ಠತಾ ಪಟ್ಟಿಯಲ್ಲಿ ಪರಿಶಿಷ್ಟ ಜಾತಿ ನೌಕರರಿಗೆ ಶೇ.15 ರಷ್ಟು ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಶೇ.3ರಷ್ಟು ಬಡ್ತಿಯಲ್ಲಿ ಪ್ರಾತಿನಿಧ್ಯತೆ ಕೊರತೆಯಿದ್ದುದರಿಂದ ಸದರಿ ಶೀಘ್ರಲಿಪಿಗಾರರ ಜ್ಯೇಷ್ಠತಾ ಪಟ್ಟಿಗಳನ್ನು ಉಲ್ಲೇಖ (9) ರ ಅಧಿಕೃತ ಜ್ಞಾಪನಗಳಲ್ಲಿ ಪುನರ್ ಪರಿಷ್ಕರಿಸಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಶೀಘ್ರಲಿಪಿಗಾರರ ಜ್ಯೇಷ್ಠತೆಯನ್ನು ಈ ಹಿಂದೆ ಇದ್ದಂತೆ ಯಥಾಸ್ಥಿತಿ ರಕ್ಷಿಸಲಾಗಿದೆ. ಸದರಿ ಶೀಘ್ರಲಿಪಿಗಾರರಿಗೆ ಸಂಬಂಧಿಸಿದಂತೆ, ಮುಂದಿನ ಬಡ್ತಿ ವೃಂದಗಳಾದ ಅಧೀಕ್ಷಕರು ಮತ್ತು ಗೆಜೆಟೆಡ್ ಮ್ಯಾನೇಜರ್ ವೃಂದಗಳಲ್ಲಿ ಅವರುಗಳಿಗೆ ಜ್ಯೇಷ್ಠತೆಯಲ್ಲಿ ಅರ್ಹತಾ ದಿನಾಂಕಗಳನ್ನು ನೀಡುವ ಮೂಲಕ ಉಲ್ಲೇಖ (10) ಮತ್ತು (11)ರ ಅಧಿಕೃತ ಜ್ಞಾಪನಗಳಲ್ಲಿ ಅಧೀಕ್ಷಕರ ಮತ್ತು ಗೆಜೆಟೆಡ್ ಮ್ಯಾನೇಜರ್‌ಗಳ ಜ್ಯೇಷ್ಠತಾ ಪಟ್ಟಿಯನ್ನು ಇದೀಗ ಭಾಗಶಃ ಪರಿಷ್ಕರಿಸಿ ಅಂತಿಮಗೊಳಿಸಿ ಪ್ರಕಟಿಸಲಾಗಿದೆ.

*DCE-12-GRADATION-2017-18*